**O.S** 33/2017

**PW**-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 05.12.2022 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದಃ ಶ್ರೀ **M.M** ರವರಿಂದ

ನನ್ನ ತಂದೆ ರಂಗಯ್ಯ ಮೂಲತಃ ಮುಡಿಗುಂಡ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮಾಂಬಳ್ಳಿಯವರು ಎಂದು ನಾನು ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಮೂಲತಃ ಮುಡಿಗುಂಡದವರು ಎಂದರೆ ನನಗೆ ಗೊತ್ತಿಲ್ಲ. ನಾನು ವಾಸ ಮಾಡುತ್ತಿರುವ ಮನೆಯ ಪಕ್ಕದಲ್ಲಿ ಪ್ರತಿವಾದಿಗಳು ವಾಸ ಮಾಡುತ್ತಿದ್ದಾರೆ ಎಂದರೆ ನಿಜ. ನಾನು ಪಶ್ಚಿಮದ ಕಡೆ ವಾಸ ಮಾಡುತ್ತಿದ್ದೇನೆ ಹಾಗೂ ಪ್ರತಿವಾದಿಗಳು ಪೂರ್ವದ ಕಡೆ ವಾಸ ಮಾಡುತ್ತಿದ್ದಾರೆ. ನಾನು 8 ಅಂಕಣದ ಜಾಗದಲ್ಲಿ ವಾಸ ಮಾಡುತ್ತಿದ್ದೇನೆ ಹಾಗೆಯೇ ಪ್ರತಿವಾದಿಗಳು ಸಹ 8 ಅಂಕಣದ ಜಾಗದಲ್ಲಿ ವಾಸ ಮಾಡುತ್ತಿದ್ದಾರೆ. ಪ್ರತಿವಾದಿ ನಂಬರ್ 2 ರಿಂದ 4 ರವರಿಗೆ ಮೇಸ್ತ್ರಿ ಮಲ್ಲಯ್ಯ ಅಜ್ಜನಾಗಬೇಕು ಎಂದರೆ ಸರಿಯಲ್ಲ ಹಾಗೆಯೇ ಪುಟ್ಟಮಾದಮ್ಮ ಅಜ್ಜಿಯಾಗಬೇಕು ಎಂದರೆ ಸರಿಯಲ್ಲ. ಮೇಸ್ತ್ರಿ ಮಲ್ಲಯ್ಯ ಮತ್ತು ಪುಟ್ಟಮಾದಮ್ಮನ ಮಗ ಮಲ್ಲಯ್ಯ ಎಂದರೆ ಸರಿಯಲ್ಲ. ಮೇಸ್ತ್ರಿ ಮಲ್ಲಯ್ಯ ಮತ್ತು ಪುಟ್ಟಮಾದಮ್ಮ ಇವರಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿಯು ಪುಟ್ಟಮಾದಮ್ಮ ಇವರಿಗೆ 3 ಜನ ಮಕ್ಕಳು ಅವರ ಗಂಡನ ಹೆಸರು ಮಲ್ಲಯ್ಯ ಆದರೆ ಮೇಸ್ತ್ರಿ ಮಲ್ಲಯ್ಯ ಅಲ್ಲ ಎಂದು ನುಡಿಯುತ್ತಾರೆ. ಈ 3 ಜನ ಮಕ್ಕಳ ಹೆಸರು ಪುಟ್ಟಬಸಮ್ಮ, ಮಲ್ಲಯ್ಯ, ಮಲ್ಲಮ್ಮ ಎಂದರೆ ನಿಜ.

1 ನೇ ಪ್ರತಿವಾದಿಯ ಗಂಡನ ಹೆಸರು ಮಲ್ಲಯ್ಯ ಎಂದರೆ ನಿಜ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಮಲ್ಲಯ್ಯ ಎಂದರೆ ನಿಜ.

ನ್ಯಾಯಾಲಯದ ಪ್ರಶ್ನೇಃ 1 ನೇ ಪ್ರತಿವಾದಿಯ ಗಂಡ ಹಾಗೂ 2 ರಿಂದ 4 ನೇ ಪ್ರತಿವಾದಿಗಳ ತಂದೆ ಹೆತರು ಏನು?

ಉತ್ತರಃ ಮೇಸ್ತ್ರಿ ಮಲ್ಲಯ್ಯ ಎಂದು ಕರೆಯುತ್ತಾರೆ.

ಸದರಿಯವರನ್ನು ಮೇಸ್ತ್ರಿ ಮಲ್ಲಯ್ಯ ಎಂದು ಕರೆಯುತ್ತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ನಿಜ. 16 ಅಂಕಣದ ಮನೆಯಲ್ಲಿ ಮಧ್ಯಕ್ಕೆ ನಾವು ಗೋಡೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೀಗೆ ಮಧ್ಯದಲ್ಲಿ ಗೋಡೆಯನ್ನು ಹಾಕಿರುತ್ತೇನೆ ಎಂದು ಪಂಚಾಯಿತಿಗೆ ಅರ್ಜಿಯನ್ನು ನೀಡಿರುತ್ತೇನೆ ಎಂದರೆ ನಿಜ ಸಾಕ್ಷಿಯು ಮುಂದುವರೆದು ಕೋತಿಗಳ ಕಾಟದಿಂದ ತಮ್ಮ ಮನೆಯ ಒಳಗೆ ತಾವು ಗೋಡೆಯನ್ನು ಹಾಕಿರುವುದಾಗಿ ಹಾಗೂ ಹದ್ದುಬಸ್ತಿಗೋಸ್ಕರ ಗೋಡೆಯನ್ನು ಹಾಕಿಲ್ಲ ಎಂದು ನುಡಿಯುತ್ತಾರೆ. ಹದ್ದುಬಸ್ಥಿಗೋಸ್ಕರ ಗೋಡೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಇರುವ 8 ಅಂಕಣದ ಜಾಗದಲ್ಲಿ ಮೊದಲು ನಮ್ಮ ತಂದೆಯವರು ವಾಸವಿದ್ದರು ಎಂದರೆ ನಿಜ. ಸುಮಾರು ಈಗ 15–20 ವರ್ಷಗಳ ಹಿಂದೆ ನಾನು ಮೇಲೆ ಹೇಳಿರುವ ಗೋಡೆಯನ್ನು ನಿರ್ಮಿಸಿರುತ್ತೇನೆ. 16 ಅಂಕಣದ ಮನೆಯು ಮೇಸ್ತ್ರಿ ಮಲ್ಲಯ್ಯ ಮತ್ತು ಪುಟ್ಟಮಲ್ಲಮ್ಮನ ಆಸ್ತಿ ಎಂದರೆ ಸಾಕ್ಷಿಯು ತಮ್ಮ ತಂದೆಯ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಂದೆಯ ತಂದೆಯ ಹೆಸರು ದಾಸಿ. ನನ್ನ ತಂದೆಯ ಹೆಸರು ಎಲ್ಲಿಯು ದಾಸಿ ರಂಗ ಎಂದು ಇಲ್ಲಾ ಎಂದರೆ ಸಾಕ್ಷಿಯು ದಾಸಿ ಎಂಬುದು ಅಡ್ಡ ಹೆಸರು ಎಂದು ನುಡಿಯುತ್ತಾರೆ.

ಪುಟ್ಟಮಾದಮ್ಮನ ತಂದೆ ಗೂಳಯ್ಯ ಇವರು ನನ್ನ ತಂದೆ ರಂಗಯ್ಯ ಇವರನ್ನು ಮನೆ ಕೆಲಸಕ್ಕೋಸ್ಕರ ಮುಡಿಗುಂಡದಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಮಲ್ಲಯ್ಯನ ಹೆಂಡತಿ ಪುಟ್ಟಮಾದಮ್ಮ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಗೂಳಯ್ಯ ರವರಿಗೆ ಪುಟ್ಟಮಾದಮ್ಮ ಒಬ್ಬಳೇ ಮಗಳು ಎಂದರೆ ನಿಜ. ಗೂಳಯ್ಯ ಇವರಿಗೆ ಒಬ್ಬಳೇ ಹೆಣ್ಣು ಮಗಳು ಇದ್ದ ಕಾರಣ ನನ್ನ ತಂದೆ ರಂಗಯ್ಯ ರವರನ್ನು ಗೂಳಯ್ಯ ರವರೇ ಕರೆದುಕೊಂಡು ಬಂದು ಸಾಕಿರುತ್ತಾರೆ ಎಂದರೆ ಸರಿಯಲ್ಲ. ರಂಗಯ್ಯ ರವರಿಗೆ ಪಶ್ಚಿಮ ದಿಕ್ಕಿನಲ್ಲಿ ವಾಸ ಮಾಡಲು ಗೂಳಯ್ಯ ರವರು ಅನುಕೂಲ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾತ ದಾಸಯ್ಯನ ಪಾಲಿಗೆ ಬಂದಂತಹ ಆಸ್ತಿಯಲ್ಲಿ ನಾನು ಈಗ ವಾಸವಿದ್ದೇನೆ. ನಮ್ಮ ತಾತನಿಗೆ ಈ 8 ಅಂಕಣದ ಮನೆ ಬಂದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ತಾತನಿಗೆ ಪಾಲು ಬಂದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ವಾಸ ಮಾಡುತ್ತಿರುವ ಮನೆಯ ನಿವೇಶನದ ಸಂಖ್ಯೆ 776, ಇದರಲ್ಲಿ 16 ಅಂಕಣದ ಮನೆ ಇರುತ್ತದೆ. 959 ಎಂಬುದು ಪಂಚಾಯಿತಿ ನಂಬರ್ ಆಗಿರುತ್ತದೆ. ಅಸಸ್‌ಮೆಂಟ್ ನಂಬರ್ 959 ಪ್ರತಿವಾದಿಗಳಿಗೆ

ಸೇರಿದಂತಹ ಆಸ್ತಿ ಎಂದರೆ ಸರಿಯಲ್ಲ. ಅಸಸ್‌ಮೆಂಟ್ ನಂಬರ್ 959 ಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳು ನನ್ನ ಹೆಸರಿನಲ್ಲಿ ಇಲ್ಲಾ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಸಂಖ್ಯೆ 776 ಎಂದರೆ ನಿಜ. ಪ್ರತಿವಾದಿಗಳಿಗೆ 07.01.1954 ರಲ್ಲಿ ಸೋಳ್ಳಿಪಿಕ್ಕನ ಚಿಕ್ಕರಂಗಯ್ಯ ರವರು ಕ್ರಯಪತ್ರವನ್ನು ಮಾಡಿಕೊಟ್ಟಿರುವಿತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 05.11.1996 ರಂದು ಸೋಳ್ಳಿಪಿಕ್ಕನ ಚಿಕ್ಕರಂಗಯ್ಯ ರವರು 1 ನೇ ಪ್ರತಿವಾದಿಯ ಪರವಾಗಿ ವಿಲ್ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ವಿಲ್‌ಗೆ ಸಾಕ್ಷಿಯಾಗಿ ಸಹಿಯನ್ನು ಮಾಡಿರುತ್ತೇನೆ ಎಂದರೆ ನಿಜ. ಸದರಿ ವಿಲ್‌ನ ನಕಲು ಪ್ರತಿಯನ್ನು ಸಾಕ್ಷಿಗೆ ಈಗ ತೋರಿಸಲಾಗಿ ಅದರಲ್ಲಿ ಇರುವ ತಮ್ಮ ಸಹಿಯನ್ನು ಸಾಕ್ಷಿಯು ಒಪ್ಪಿದ ಕಾರಣ ಸದರಿ ವಿಲ್‌ನ ನಕಲು ಪ್ರತಿಯನ್ನು ನಿಡಿ–1 ಎಂದು ಗುರುತಿಸಲಾಯಿತು.

(ಈ ಹಂತರದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

05.12.2022.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.